**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತ ಮೂರನೆಯ ಅಧಿವೇಶನ**

# ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–35)**
**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 7ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 7ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“**7. ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯ ನೇಮಕಾತಿ, ಕರ್ತವ್ಯಗಳು ಮತ್ತು ಪ್ರಕಾರ್ಯಗಳು.-** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳನ್ನು ನೇಮಿಸತಕ್ಕದ್ದು.

(2) ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯು ರಾಜ್ಯದಲ್ಲಿ ಮುಖ್ಯ ಕಂದಾಯ ಅಧಿಕಾರಿಯಾಗಿರತಕ್ಕದ್ದು ಮತ್ತು ಆತನಿಗೆ ಅಧೀನದಲ್ಲಿರುವ ಇಡೀ ರಾಜ್ಯದಲ್ಲಿನ ಎಲ್ಲಾ ಅಧಿಕಾರಿಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಅಧಿಕಾರವನ್ನು ಚಲಾಯಿಸತಕ್ಕದ್ದು.

(3) ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ಆತನಿಗೆ ಪ್ರದತ್ತವಾದ ಮತ್ತು ನೀಡಲಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಥವಾ ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ತನ್ನ ಪರವಾಗಿ ಪ್ರದತ್ತಗೊಳಿಸಬಹುದಾದ ಅಥವಾ ನೀಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ’’

**3. 7ಎ ಮತ್ತು 7ಬಿ ಹೊಸ ಪ್ರಕರಣಗಳ ಸೇರ್ಪಡೆ.-** ಮೂಲ ಅಧಿನಿಯಮದಲ್ಲಿ ಹಾಗೆ ಸೇರಿಸಲಾದ 7ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“**7ಎ. ಕಂದಾಯ ಕಮೀಷನರ್ ನೇಮಕಾತಿ, ಕರ್ತವ್ಯಗಳು ಮತ್ತು ಪ್ರಕಾರ್ಯಗಳು.-** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಕಂದಾಯ ಕಮೀಷನರ್‌ನನ್ನು ನೇಮಿಸತಕ್ಕದ್ದು, ಆತನು ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗೆ ಅಧೀನನಾಗಿರತಕ್ಕದ್ದು.

(2) ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಕಂದಾಯ ಕಮೀಷನರ್‌ನು ಆತನಿಗೆ ಅಧೀನದಲ್ಲಿರುವ ಇಡೀ ರಾಜ್ಯದಲ್ಲಿನ ಎಲ್ಲಾ ಅಧಿಕಾರಿಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಅಧಿಕಾರವನ್ನು ಚಲಾಯಿಸತಕ್ಕದ್ದು.

(3) ಕಂದಾಯ ಕಮೀಷನರ್‌ನು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಡಿ ಆತನಿಗೆ ಪ್ರದತ್ತವಾದ ಮತ್ತು ನೀಡಲಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ತನ್ನ ಪರವಾಗಿ ಪ್ರದತ್ತಗೊಳಿಸಬಹುದಾದ ಅಥವಾ ನೀಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**7ಬಿ. ರೀಜನಲ್ ಕಮೀಷನರ್‌ನ ನೇಮಕಾತಿ, ಕರ್ತವ್ಯಗಳು ಮತ್ತು ಪ್ರಕಾರ್ಯಗಳು.-** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಪ್ರತಿ ವಿಭಾಗಕ್ಕೂ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗೆ ಅಧೀನನಾದ ರೀಜನಲ್ ಕಮೀಷನರ್‌ನನ್ನು ನೇಮಿಸತಕ್ಕದ್ದು.

(2) ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಪ್ರಾದೇಶಿಕ ಕಮೀಷನರ್‌ನು ಕಂದಾಯ ವಿಭಾಗದ ಮುಖ್ಯ ಕಂದಾಯ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಭಾಗದೊಳಗಿನ ತನಗೆ ಅಧೀನರಾದ ಎಲ್ಲಾ ಅಧಿಕಾರಿಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಅಧಿಕಾರವನ್ನು ಚಲಾಯಿಸತಕ್ಕದ್ದು

(3) ಪ್ರಾದೇಶಿಕ ಕಮೀಷನರ್‌ನು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಡಿ ಆತನಿಗೆ ಪ್ರದತ್ತವಾದ ಮತ್ತು ನೀಡಲಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ತನ್ನ ಪರವಾಗಿ ಪ್ರದತ್ತಗೊಳಿಸಬಹುದಾದ ಅಥವಾ ನೀಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.’’

**4. 8ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 8ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ”ಅವನು ರೀಜನಲ್ ಕಮೀಷನರ್‌ಗೆ ಅಧೀನನಾಗಿರತಕ್ಕದ್ದು” ಎಂಬ ಪದಗಳ ಬದಲಿಗೆ ”ಅವನು ಕಂದಾಯ ಕಮೀಷನರ್‌ಗೆ ಮತ್ತು ವಿಭಾಗದ ರೀಜನಲ್ ಕಮೀಷನರ್‌ಗೆ ಅಧೀನನಾಗಿರತಕ್ಕದ್ದು” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 9ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 9ನೇ ಪ್ರಕರಣದ (3)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಉಪ-ಪ್ರಕರಣ (1)ರಡಿಯಲ್ಲಿ ನೇಮಕಗೊಂಡ ವಿಶೇಷ ಡೆಪ್ಯೂಟಿ ಕಮೀಷನರ್‌ನು ಕಂದಾಯ ಕಮೀಷನರ್‌ಗೆ ಅಧೀನನಾಗಿರತಕ್ಕದ್ದು. ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಪರವಾಗಿ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳನ್ನು ಹೊರತುಪಡಿಸಿ, ಆತನು ವಿಭಾಗದ ರೀಜನಲ್ ಕಮೀಷನರ್‌ಗೂ ಸಹ ಅಧೀನನಾಗಿರತಕ್ಕದ್ದು.”

**6. 10ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ”ಅಧೀನರಾಗಿರತಕ್ಕದ್ದು” ಎಂಬ ಪದಗಳಿಗೆ ಮೊದಲು ”ಕಂದಾಯ ಕಮೀಷನರ್‌ಗೆ” ಎಂಬ ಪದಗಳನ್ನು ಸೇರಿಸತಕ್ಕದ್ದು.

**7. 13ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ”ಪ್ರಾದೇಶಿಕ ಆಯುಕ್ತರು” ಎಂಬ ಪದಗಳ ಮೊದಲು ”ಕಂದಾಯ ಕಮೀಷನರ್ ಅಥವಾ” ಎಂಬ ಪದಗಳನ್ನು ಸೇರಿಸತಕ್ಕದ್ದು.

**8. 14ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 14ನೇ ಪ್ರಕರಣದ (1)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಕಂದಾಯ ಕಮೀಷನರ್ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತನಾಗಿದ್ದರೆ ಅಥವಾ ರಜೆಯಲ್ಲಿದ್ದರೆ ಅಥವಾ ಯಾವುದೇ ಕಾರಣಕ್ಕಾಗಿ ಆತನ ಹುದ್ದೆಯನ್ನು ತೆರವುಗೊಳಿಸಿದರೆ ಅಥವಾ ಮರಣಹೊಂದಿದರೆ, ಕಂದಾಯ ಕಮೀಷನರ್‌ನ ಪ್ರಧಾನ ಕಛೇರಿಯಲ್ಲಿ ಇರುವ ಪ್ರಾದೇಶಿಕ ಕಮೀಷನರ್‌ನು,

ಸರ್ಕಾರವು ಇತರ ಉಪಬಂಧಗಳನ್ನು ಮಾಡದ ಹೊರತು, ಆತನ ಹುದ್ದೆಗೆ ತಾತ್ಕಾಲಿಕವಾಗಿ ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಕಂದಾಯ ಕಮೀಷನರ್ ಅಧಿಕಾರವನ್ನು ಪುನರ್ವಹಿಸಿಕೊಳ್ಳುವವರೆಗೆ ಅಥವಾ ಸರ್ಕಾರವು ಹಿಂದಿನ ಕಂದಾಯ ಕಮೀಷನರ್‌ನ ಉತ್ತರಾಧಿಕಾರಿಯನ್ನು ನೇಮಿಸುವವರೆಗೆ ಮತ್ತು ಅಂಥ ಉತ್ತರಾಧಿಕಾರಿಯು ಆತನ ನೇಮಕಾತಿಯ ಪ್ರಭಾರೆಯನ್ನು ವಹಿಸಿಕೊಳ್ಳುವವರೆಗೆ ಈ ಅಧಿನಿಯಮದಡಿಯಲ್ಲಿ ರಾಜ್ಯದ ಕಂದಾಯ ಕಮೀಷನರ್ ಎಂದು ಭಾವಿಸತಕ್ಕದ್ದು.

(1-ಎ) ರೀಜನಲ್ ಕಮೀಷನರ್ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತನಾಗಿದ್ದರೆ ಅಥವಾ ರಜೆಯಲ್ಲಿದ್ದರೆ ಅಥವಾ ಯಾವುದೇ ಕಾರಣಕ್ಕಾಗಿ ಆತನ ಹುದ್ದೆಯನ್ನು ತೆರವುಗೊಳಿಸಿದರೆ ಅಥವಾ ಮರಣಹೊಂದಿದರೆ, ರೀಜನಲ್ ಕಮೀಷನರ್‌ನ ಪ್ರಧಾನ ಕಛೇರಿಯಲ್ಲಿ ಇರುವ ಡೆಪ್ಯೂಟಿ ಕಮೀಷನರ್‌ನು, ಸರ್ಕಾರವು ಇತರ ಉಪಬಂಧಗಳನ್ನು ಮಾಡದ ಹೊರತು, ಆತನ ಹುದ್ದೆಗೆ ತಾತ್ಕಾಲಿಕವಾಗಿ ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ರೀಜನಲ್ ಕಮೀಷನರ್ ಅಧಿಕಾರವನ್ನು ಪುನರ್ವಹಿಸಿಕೊಳ್ಳುವವರೆಗೆ ಅಥವಾ ಸರ್ಕಾರವು ಹಿಂದಿನ ರೀಜನಲ್ ಕಮೀಷನರ್‌ನ ಉತ್ತರಾಧಿಕಾರಿಯನ್ನು ನೇಮಿಸುವವರೆಗೆ ಮತ್ತು ಅಂಥ ಉತ್ತರಾಧಿಕಾರಿಯು ಆತನ ನೇಮಕಾತಿಯ ಪ್ರಭಾರೆಯನ್ನು ವಹಿಸಿಕೊಳ್ಳುವವರೆಗೆ ಈ ಅಧಿನಿಯಮದಡಿಯಲ್ಲಿ ರಾಜ್ಯದ ರೀಜನಲ್ ಕಮೀಷನರ್ ಎಂದು ಭಾವಿಸತಕ್ಕದ್ದು."

**9. 15ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 15ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ" ರೀಜನಲ್ ಕಮೀಷನರನ" ಎಂಬ ಪದಗಳ ತರುವಾಯ "ಅಥವಾ ಕಂದಾಯ ಕಮೀಷನರನ" ಎಂಬ ಪದಗಳನ್ನು ಸೇರಿಸತಕ್ಕದ್ದು.

**10. 16ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 16ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ"ರಾಜ್ಯ ಸರ್ಕಾರದ" ಎಂಬ ಪದಗಳ ತರುವಾಯ "ಕಂದಾಯ ಕಮೀಷನರನ" ಎಂಬ ಪದಗಳನ್ನು ಸೇರಿಸತಕ್ಕದ್ದು.

**11. 69ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 69ನೇ ಪ್ರಕರಣದಲ್ಲಿ"ರಾಜ್ಯ ಸರ್ಕಾರವು" ಎಂಬ ಪದಗಳ ತರುವಾಯ "ಕಂದಾಯ ಕಮೀಷನರ್" ಎಂಬ ಪದಗಳನ್ನು ಸೇರಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು  ಮಂಡಿಸುವಾಗ ಲಗತ್ತಿಸಿದಂತೆ)**

ರಾಜ್ಯದಲ್ಲಿ ಕಂದಾಯ ಆಯುಕ್ತಾಲಯವನ್ನು ಸ್ಥಾಪಿಸಿದ್ದು, ಕಂದಾಯ ಆಯುಕ್ತಾಲಯದ ನೇಮಕಾತಿ, ಕರ್ತವ್ಯಗಳು ಮತ್ತು ಪ್ರಕಾರ್ಯಗಳ ಕುರಿತು ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ  ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ (1964ರ ಕರ್ನಾಟಕ ಅಧಿನಿಯಮ 12ರ) ಉದ್ಧೃತ ಭಾಗ

**XXX XXX XXX**

**7. ರೀಜನಲ್ ಕಮೀಷನರ್‌ರ ನೇಮಕ, ಕರ್ತವ್ಯಗಳು ಮತ್ತು ಪ್ರಕಾರ್ಯಗಳು.-** (1) ಪ್ರತಿಯೊಂದು ಪ್ರತ್ಯೇಕ ಪ್ರದೇಶಕ್ಕೆ ಒಬ್ಬರು ರೀಜನಲ್ ಕಮೀಷನರ್‌ರನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡತಕ್ಕದ್ದು.

(2) ರೀಜನಲ್ ಕಮೀಷನರ್‌ರು, ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು, ವಿಭಾಗಕ್ಕೆ ಮುಖ್ಯ ರೆವಿನ್ಯೂಅಧಿಕಾರಿಯಾಗಿರತಕ್ಕದ್ದು ಮತ್ತು ವಿಭಾಗದಲ್ಲಿ ತನ್ನ ಅಧೀನದಲ್ಲಿರುವ ಎಲ್ಲ ಅಧಿಕಾರಿಗಳ ಮೇಲೆ ಮೇಲ್ವಿಚಾರಣೆಯ ಹಾಗೂ ನಿಯಂತ್ರಣದ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3) ರೀಜನಲ್ ಕಮೀಷನರ್‌ರು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಅಥವಾ ಅಂಥ ಕಾನೂನಿನಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ವಹಿಸಿದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ಈ ಬಗ್ಗೆ ರಾಜ್ಯ ಸರ್ಕಾರದಿಂದ ಪ್ರದತ್ತವಾಗಬಹುದಾದಂಥ ಅಧಿಕಾರಗಳನ್ನು ಸಹ ಚಲಾಯಿಸತಕ್ಕದ್ದು ಮತ್ತು ವಹಿಸಬಹುದಾದಂಥ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

**XXX XXX XXX**

**8. ಡೆಪ್ಯುಟಿ ಕಮಿಷನರು.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಗೆ ಒಬ್ಬರು ಡೆಪ್ಯೂಟಿ ಕಮೀಷನರನನ್ನು ನೇಮಕ ಮಾಡತಕ್ಕದ್ದು ಮತ್ತು ಅವನು ರೀಜನಲ್ ಕಮೀಷನರ್‌ಗೆ ಅಧೀನನಾಗಿರತಕ್ಕದ್ದು.

(2) ಡೆಪ್ಯುಟಿ ಕಮಿಷನರನು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ತನಗೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ತನ್ನ ಜಿಲ್ಲೆಯಲ್ಲಿ ಚಲಾಯಿಸತಕ್ಕದ್ದು ಮತ್ತು ತನಗೆ ವಹಿಸಿದ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅಲ್ಲದೆ, ಅವನು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅಸಿಸ್ಟೆಂಟ್ ಕಮಿಷನರನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ವಹಿಸಿದ ಕರ್ತವ್ಯಗಳನ್ನು ನಿರ್ವಹಿಸಬಹುದು, ಮತ್ತು ಕಾನೂನಿನಿಂದ ವಿಶೇಷವಾಗಿ ಉಪಬಂಧಿಸಲಾಗಿರುವ ಎಲ್ಲ ವಿಷಯಗಳಲ್ಲಿ ಅವನು ರಾಜ್ಯ ಸರ್ಕಾರದ ಸೂಚನೆಗಳ ಮೇರೆಗೆ ಕಾರ್ಯನಿವಹಿಸತಕ್ಕದ್ದು.

**XXX XXX XXX**

**9. ವಿಶೇಷ ಡೆಪ್ಯುಟಿ ಕಮಿಷನರು.-** (1) ಯಾವುದೇ ಅವಧಿಯವರೆಗೆ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಜಿಲ್ಲೆಗೆ ಒಬ್ಬರು ವಿಶೇಷ ಡೆಪ್ಯುಟಿ ಕಮಿಷನರನನ್ನು ನೇಮಕಮಾಡುವುದು ವಿಹಿತವೆಂದು ರಾಜ್ಯ ಸರ್ಕಾರವು ಪರ್ಯಾಲೋಚಿಸಿದಲ್ಲಿ, ಅದು ಅಧಿಸೂಚನೆಯ ಮೂಲಕ, ಅದರಲ್ಲಿ ಉಲ್ಲೇಖಿಸಬಹುದಾದಂಥ ಜಿಲ್ಲೆಗೆ ಅಂಥ ಉದ್ದೇಶಕ್ಕಾಗಿ ಮತ್ತು ಅಂಥ ಅವಧಿಗಾಗಿ ಒಬ್ಬರು ವಿಶೇಷ ಡೆಪ್ಯುಟಿ ಕಮೀಷನರನನ್ನು ನೇಮಕ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೇರೆಗೆ ಡೆಪ್ಯೂಟಿ ಕಮಿಷನರು ಜಿಲ್ಲೆಯಲ್ಲಿ ಅಥವಾ ಜಿಲ್ಲೆಯ ಭಾಗದಲ್ಲಿ ಚಲಾಯಿಸುವಂಥ ಅಧಿಕಾರಗಳನ್ನು ಅಥವಾ ನೆರವೇರಿಸುವಂಥ ಕರ್ತವ್ಯಗಳನ್ನು ವಿಶೇಷ ಡೆಪ್ಯುಟಿ ಕಮಿಷನರು, ರಾಜ್ಯ ಸರ್ಕಾರವು ನಿರ್ದೇಶಿಸಿದಂತೆ ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ವಿಶೇಷ ಡೆಪ್ಯೂಟಿ ಕಮಿಷನರನು, ರೀಜನಲ್ ಕಮೀಷನರ್‌ಗೆ ಅಧೀನನಾಗಿರತಕ್ಕದ್ದು. ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳನ್ನುಳಿದು ಜಿಲ್ಲೆಯ ಡೆಪ್ಯುಟಿ ಕಮೀಷನರನಿಗೂ ಕೂಡ ಅವನು ಅಧೀನನಾಗಿರತಕ್ಕದ್ದು.

**XXX XXX XXX**

**10. ಅಸಿಸ್ಟೆಂಟ್ ಕಮಿಷನರು.-** (1) ರಾಜ್ಯ ಸರ್ಕಾರವು ಪ್ರತಿಯೊಂದು ಜಿಲ್ಲೆಗೆ, ಸೂಕ್ತವೆಂದು ತಾನು ಭಾವಿಸುವಷ್ಟು ಸಂಖ್ಯೆಯ ಅಸಿಸ್ಟೆಂಟ್ ಕಮೀಷನರರನ್ನು ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು; ಅಂಥ ಎಲ್ಲ ಅಸಿಸ್ಟೆಂಟ್ ಕಮಿಷನರು ಮತ್ತು ಜಿಲ್ಲೆಯ ರೆವಿನ್ಯೂಆಡಳಿತದಲ್ಲಿ

ನಿಯೋಜಿತರಾಗಿರುವ ಇತರ ಎಲ್ಲಾ ಅಧಿಕಾರಿಗಳು ರೀಜನಲ್ ಕಮೀಷನರ್‌ಗೆ ಅಥವಾ ಡೆಪ್ಯೂಟಿ ಕಮಿಷನರಿಗೆ ಅಧೀನರಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು (1)ನೇ ಉಪ ಪ್ರಕರಣದ ಮೇರೆಗೆ ನೇಮಕ ಮಾಡಿದ ಯಾರೇ ಅಸಿಸ್ಟೆಂಟ್ ಕಮೀಷನರನಿಗೆ, ರೆವಿನ್ಯೂ ಉಪವಿಭಾಗ ಎಂದು ಕರೆಯಲ್ಪಡುವ, ಒಂದು ತಾಲೂಕನ್ನು ಅಥವಾ ಹೆಚ್ಚು ತಾಲೂಕುಗಳನ್ನೊಳಗೊಂಡಿರುವ ರೆವಿನ್ಯೂ ಉಪವಿಭಾಗದ ಆಡಳಿತದ ಹೊಣೆಗಾರಿಕೆಯನ್ನು ವಹಿಸಬಹುದು. ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನ ಮೂಲಕ ಅಸಿಸ್ಟೆಂಟ್ ಕಮೀಷನರನಿಗೆ ಪ್ರದತ್ತವಾದ ಅಂಥ ಎಲ್ಲ ಕರ್ತವ್ಯಗಳನ್ನು ಅಸಿಸ್ಟೆಂಟ್ ಕಮಿಷನರು ನೆರವೇರಿಸತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು Vನೇ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಆದೇಶಗಳು ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು, ಆ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೂಲಕ ಡೆಪ್ಯುಟಿ ಕಮಿಷನರನಿಗೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಕೂಡ ಅಂಥ ಅಸಿಸ್ಟೆಂಟ್ ಕಮಿಷನರನು ಚಲಾಯಿಸತಕ್ಕದ್ದು ಮತ್ತು ಅಂಥ ಎಲ್ಲ ಕರ್ತವ್ಯಗಳನ್ನು ಸಹ ನೆರವೇರಿಸತಕ್ಕದ್ದು.

(3) ಉಪಪ್ರಕರಣ (1)ರಮೇರೆಗೆ ನೇಮಕಗೊಂಡ ಆದರೆ (2)ನೇ ಉಪಪ್ರಕರಣದ ಅಡಿಯಲ್ಲಿ ರೆವಿನ್ಯೂ ಉಪವಿಭಾಗದ ಆಡಳಿತವನ್ನು ಹೊಂದಿರುವAಥ ಅಸಿಸ್ಟೆಂಟ್ ಕಮಿಷನರನು, ರಾಜ್ಯ ಸರ್ಕಾರದ ಆದೇಶಗಳಿಗೊಳಪಟ್ಟು, ಡೆಪ್ಯುಟಿ ಕಮಿಷನರನು ಅವನಿಗೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**XXX XXX XXX**

**13. ತಹಸೀಲ್ದಾರನು ಅಥವಾ ವಿಶೇಷ ತಹಸೀಲ್ದಾರನು ತನ್ನ ಕೆಲಸ ಕರ್ತವ್ಯಗಳನ್ನು ನಿರ್ವಹಿಸಲು ತನಗೆ ಅಧೀನರಾಗಿರುವವರನ್ನು ಪ್ರತಿನಿಯೋಜಿಸಬಹುದು.-** ಪ್ರಾದೇಶಿಕ ಆಯುಕ್ತರು ಅಥವಾ ಡೆಪ್ಯುಟಿ ಕಮಿಷನರನು ಮಾಡಬಹುದಾದಂಥ ಆದೇಶಗಳಿಗೊಳಪಟ್ಟು, ಆಡಳಿತಕ್ಕೆ ಸಂಬಂಧಿಸಿದ ಕರ್ತವ್ಯಗಳ ಯಾವುದೇ ಭಾಗವನ್ನು ನಿರ್ವಹಿಸಲು ತನ್ನ ಅಧೀನ ಅಧಿಕಾರಿಗಳ ಪೈಕಿ ಯಾರನ್ನಾದರೂ ತಹಸೀಲ್ದಾರನು ಅಥವಾ ವಿಶೇಷ ತಹಸೀಲ್ದಾರನು ಪ್ರತಿನಿಯೋಜಿಸಬಹುದು.

ಪರಂತು, ಹಾಗೆ ನಿಯೋಜಿಸಿದಾಗ ಅವನ ಅಧೀನ ಅಧಿಕಾರಿಗಳ ಎಲ್ಲ ಕಾರ್ಯಗಳು ಅಂಥ ತಹಸೀಲ್ದಾರನ ಅಥವಾ ವಿಶೇಷ ತಹಸೀಲ್ದಾರನ ಪುನರೀಕ್ಷಣೆಗೆ ಮತ್ತು ಸ್ಥಿರೀಕರಣಕ್ಕೆ ಒಳಪಟ್ಟಿರುತಕ್ಕದ್ದು.

**XXX XXX XXX**

**14. ಹಂಗಾಮಿ ಖಾಲಿ ಸ್ಥಾನಗಳಲ್ಲಿ ಅಧಿಕಾರಿಗಳು ಕರ್ತವ್ಯಗಳನ್ನು ನಿರ್ವಹಿಸುವುದು.-**(1) ರೀಜನಲ್ ಕಮೀಷನರ್‌ರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತನಾದರೆ ಅಥವಾ ರಜೆಯ ಮೇಲಿದ್ದರೆ ಅಥವಾ ಯಾವುದೇ ಕಾರಣದಿಂದಾಗಿ ತನ್ನ ಹುದ್ದೆಯನ್ನು ತ್ಯಜಿಸಿದರೆ ಅಥವಾ ಮೃತಪಟ್ಟರೆ, ರೀಜನಲ್ ಕಮೀಷನರ್ ಕೇಂದ್ರ ಕಾರ್ಯಸ್ಥಳದಲ್ಲಿರುವ ಡೆಪ್ಯುಟಿ ಕಮಿಷನರನು, ರಾಜ್ಯ ಸರ್ಕಾರವು ಬೇರೆ ಏರ್ಪಾಟು ಮಾಡಿದ ಹೊರತು, ಆ ಪ್ರಾದೇಶಿಕ ಆಯುಕ್ತರ ಹುದ್ದೆಗೆ ತಾತ್ಕಾಲಿಕವಾಗಿ ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಪ್ರಾದೇಶಿಕ ಆಯುಕ್ತರು ತಮ್ಮ ವಿಭಾಗದ ಆಡಳಿತವನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ಮೊದಲಿನ ಪ್ರಾದೇಶಿಕ ಆಯುಕ್ತರ ಸ್ಥಳದಲ್ಲಿ ರಾಜ್ಯ ಸರ್ಕಾರವು ಉತ್ತರಾಧಿಕಾರಿಯನ್ನು ನೇಮಿಸಿದಾಗ ಅಂಥ ಉತ್ತರಾಧಿಕಾರಿಯು ತನ್ನ ನೇಮಕ ಆದಾಗ ಆಡಳಿತವನ್ನು ವಹಿಸಿಕೊಳ್ಳುವವರೆಗೆ ಈ ಅಧಿನಿಯಮದ ಅಡಿಯಲ್ಲಿ ಆ ವಿಭಾಗದ ಪ್ರಾದೇಶಿಕ ಆಯುಕ್ತರೆಂದು ಭಾವಿಸತಕ್ಕದ್ದು.

(2) ಡೆಪ್ಯುಟಿ ಕಮಿಷನರ್‌ರನು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತ್ನಾದರೆ ಅಥವಾ ಯಾವುದೇ ಕಾರಣದಿಂದಾಗಿ ತನ್ನ ಹುದ್ದೆಯನ್ನು ತ್ಯಜಿಸಿದರೆ ಅಥವಾ ತನ್ನ ಜಿಲ್ಲೆಯನ್ನು ಬಿಟ್ಟು ಹೋದರೆ ಅಥವಾ ಮೃತಪಟ್ಟರೆ, ವಿಶೇಷ ಡೆಪ್ಯೂಟಿ ಕಮಿಷನರನು, ಯಾರಾದರೂ ಇದ್ದರೆ, ಅಥವಾ ಅವನು ಇರದಿದ್ದರೆ ಆ ಜಿಲ್ಲೆಯ ಕೇಂದ್ರಕಾರ್ಯ ಸ್ಥಳದಲ್ಲಿರುವ ಅತ್ಯಂತ ಹಿರಿಯ ಅಸಿಸ್ಟೆಂಟ್ ಕಮಿಷನರನು, ರಾಜ್ಯ ಸರ್ಕಾರವು ಬೇರೆ ಏರ್ಪಾಟು ಮಾಡಿದ ಹೊರತು, ಆ ಹುದ್ದೆಗೆ ತಾತ್ಕಾಲಿಕವಾಗಿ ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಡೆಪ್ಯುಟಿ ಕಮಿಷನರನು ತನ್ನ ಜಿಲ್ಲೆಯ ಆಡಳಿತವನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ರಾಜ್ಯ ಸರ್ಕಾರವು ಅವನ ಬದಲಿಗೆ ಉತ್ತರಾಧಿಕಾರಿಯನ್ನು ನೇಮಿಸಿದಾಗ, ಅವನು ಆಡಳಿತವನ್ನು ವಹಿಸಿಕೊಳ್ಳುವವರೆಗೆ ಅಂಥ ಅಸಿಸ್ಟಟೆಂಟ್ ಕಮೀಷನರ್‌ನನ್ನು ಈ ಅಧಿನಿಯಮದ ಮೇರೆಗೆ ಡೆಪ್ಯುಟಿ ಕಮೀಷನರನೆಂದು ಭಾವಿಸತಕ್ಕದ್ದು.

(3) ರೆವಿನ್ಯೂ ಉಪವಿಭಾಗದ ಅಸಿಸ್ಟೆಂಟ್ ಕಮಿಷನರನ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತ್ನಾದರೆ ಅಥವಾ ರಜೆಯ ಮೇಲಿದ್ದರೆ ಅಥವಾ ಯಾವುದೇ ಕಾರಣದಿಂದಾಗಿ ತನ್ನ ಹುದ್ದೆಯನ್ನು ತ್ಯಜಿಸಿದರೆ ಅಥವಾ ಮೃತಪಟ್ಟರೆ, ಅಸಿಸ್ಟೆಂಟ್ ಕಮಿಷನರನ ಕಛೇರಿಯ ಕೇಂದ್ರ ಕಾರ್ಯಸ್ಥಳದಲ್ಲಿ ಇರುವ ತಹಸೀಲ್ದಾರನು, ಸರ್ಕಾರವು ಬೇರೆ ಏರ್ಪಾಟನ್ನು ಮಾಡಿದ ಹೊರತು, ಆ ಅಸಿಸ್ಟೆಂಟ್ ಕಮಿಷನರನ ಹುದ್ದೆಗೆ ತಾತ್ಕಾಲಿಕವಾಗಿ, ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಆ ಅಸಿಸ್ಟೆಂಟ್ ಕಮಿಷನರು ತನ್ನ ರೆವಿನ್ಯೂ

ಉಪವಿಭಾಗದ ಆಡಳಿತವನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ಸರ್ಕಾರವು ಮೊದಲಿನ ಅಸಿಸ್ಟೆಂಟ್ ಕಮಿಷನರನ ಬದಲಿಗೆ ಉತ್ತರಾಧಿಕಾರಿಯನ್ನು ನೇಮಿಸಿ, ಅಂಥ ಉತ್ತರಾಧಿಕಾರಿಯು ಆಡಳಿತವನ್ನು ವಹಿಸಿಕೊಳ್ಳುವವರೆಗೆ, ಈ ಅಧಿನಿಯಮದ ಮೇರೆಗೆ ಅಂಥ ತಹಸೀಲ್ದಾರನನ್ನು ರೆವಿನ್ಯೂ ಉಪವಿಭಾಗದ ಅಸಿಸ್ಟೆಂಟ್ ಕಮಿಷನರನೆಂದು ಭಾವಿಸತಕ್ಕದ್ದು.

(4) ತಹಸೀಲ್ದಾರನು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತನಾದರೆ ಅಥವಾ ಯಾವುದೇ ಕಾರಣದಿಂದಾಗಿ ತನ್ನ ಹುದ್ದೆಯನ್ನು ತ್ಯಜಿಸಿದರೆ ಅಥವಾ ತನ್ನ ತಾಲ್ಲೂಕನ್ನು ಬಿಟ್ಟು ಹೋದರೆ ಅಥವಾ ಮೃತ ಪಟ್ಟರೆ, ವಿಶೇಷ ತಹಶೀಲ್ದಾರನು ಯಾರಾದರೂ ಇದ್ದರೆ, ಅಥವಾ ಅವನು ಇರದಿದ್ದರೆ ತಾಲೂಕು ಕಚೇರಿಯ ಅತ್ಯಂತ ಹಿರಿಯ ಲಿಪಿಕ ಅಧಿಕಾರಿಯು ಸದರಿ ತಹಸೀಲ್ದಾರನ ಹುದ್ದೆಗೆ ಹಂಗಾಮಿಯಾಗಿ ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಆ ತಹಶೀಲ್ದಾರನು ತನ್ನ ತಾಲ್ಲೂಕಿನ ಆಡಳಿತವನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ಆ ತಹಸೀಲ್ದಾರ್ ಹುದ್ದೆಗೆ ಉತ್ತರಾಧಿಕಾರಿಯು ಕ್ರಮಬದ್ಧವಾಗಿ ನೇಮಕಗೊಂಡು ಆಡಳಿತವನ್ನು ವಹಿಸಿಕೊಳ್ಳುವವರೆಗೆ, ಈ ಅಧಿನಿಯಮದ ಮೇರೆಗೆ ಅಂಥ ಲಿಪಿಕ ಅಧಿಕಾರಿಯನ್ನು ತಹಸೀಲ್ದಾರನೆಂದು ಭಾವಿಸತಕ್ಕದ್ದು.

**XXX XXX XXX**

**15. ರೆವಿನ್ಯೂ ಇನ್‌ಸ್ಪೆಕ್ಟರುಗಳು.-** (1) ಡೆಪ್ಯುಟಿ ಕಮಿಷನರನು ರೀಜನಲ್ ಕಮೀಷನರ ಅಥವಾ ರಾಜ್ಯ ಸರ್ಕಾರದ ಸಾಮಾನ್ಯ ಆದೇಶಗಳಿಗೊಳಪಟ್ಟು, ಪ್ರತಿಯೊಂದು ಹೋಬಳಿಗೆ ಒಬ್ಬ ರೆವಿನ್ಯೂ ಇನ್ಸ್ಪೆಕ್ಟರ್ ನನ್ನು ನೇಮಕ ಮಾಡಬಹುದು ಮತ್ತು ಅವನು ಈ ಅಧಿನಿಯಮದಲ್ಲಿ ಅಥವಾ ಇದರ ಮೇರೆಗೆ ಅಥವಾ ತಾತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಕಾನೂನಿನಲ್ಲಿ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂತೆ ರೆವಿನ್ಯೂ ಇನ್‌ಸ್ಪೆಕ್ಟರನ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಆ ಹುದ್ದೆಯಲ್ಲಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಹೋಬಳಿಯ ರೆವಿನ್ಯೂ ಇನ್ ಸ್ಪೆಕ್ಟರ್‌ನ ಹುದ್ದೆಯಲ್ಲಿರುವ ವ್ಯಕ್ತಿಗಳನ್ನು (ಅವರನ್ನು ಯಾವುದೇ ಹೆಸರಿನಿಂದ ಕರೆಯಲಿ) (1)ನೇ ಉಪ ಪ್ರಕರಣದ ಮೇರೆಗೆ ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡುವವರೆಗೆ, ಅಂಥ ಹೋಬಳಿಯ ರೆವಿನ್ಯೂ ಇನ್ ಸ್ಪೆಕ್ಟರುಗಳೆಂದು ಭಾವಿಸತಕ್ಕದ್ದು.

**XXX XXX XXX**

**16. ಗ್ರಾಮ ಲೆಕ್ಕಿಗ.-** (1) ಡೆಪ್ಯೂಟಿ ಕಮಿಷನರನು,ರಾಜ್ಯ ಸರ್ಕಾರದ ಮತ್ತು ರೀಜನಲ್ ಕಮೀಷನರ್ ಸಾಮಾನ್ಯ ಆದೇಶಗಳಿಗೊಳಪಟ್ಟು ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಗುಂಪಿಗೆ ಒಬ್ಬ ಗ್ರಾಮ ಲೆಕ್ಕಿಗನನ್ನು ನೇಮಕ ಮಾಡಬಹುದು ಮತ್ತು ಅವನು ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನಲ್ಲಿ ಅಥವಾ ಅದರ ಮೇರೆಗೆ ನಿಯಮಿಸಲಾದ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯಮಗಳ ಮೇರೆಗೆ ಆ ಹುದ್ದೆಯಲ್ಲಿರತಕ್ಕದ್ದು ಮತ್ತು ಆ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಗುಂಪಿಗೆ ಗ್ರಾಮ ಲೆಕ್ಕಿಗನ ಹುದ್ದೆಯಲ್ಲಿರುವ ವ್ಯಕ್ತಿಗಳನ್ನು, (1)ನೇ ಉಪಪ್ರಕರಣದ ಮೇರೆಗೆ ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡುವವರೆಗೆ, ಅಂಥ ಗ್ರಾಮದ ಅಥವಾ ಗ್ರಾಮಗಳ ಗುಂಪಿಗೆ ಗ್ರಾಮ ಲೆಕ್ಕಿಗರೆಂದು ಭಾವಿಸತಕ್ಕದ್ದು.

**XXX XXX XXX**

**69. 67ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರಕ್ಕೆ ಸೇರಿರುವ ಭೂಮಿಗಳ ಅಥವಾ ಇತರ ಸ್ವತ್ತಿನ ವಿಲೇವಾರಿ.-** ಈ ಸಂಬಂಧದಲ್ಲಿ ಮಾಡಬಹುದಾದಂತಹ ನಿಯಮಗಳಿಗೊಳಪಟ್ಟು, ರಾಜ್ಯ ಸರ್ಕಾರವು, ರೀಜನಲ್ ಕಮೀಷನರು, ಡೆಪ್ಯುಟಿ ಕಮಿಷನರು ತಾಲ್ಲೂಕು ಅಥವಾ ತಾಲ್ಲೂಕುಗಳ ಆಡಳಿತವನ್ನು ಹೊಂದಿರುವ ಅಸಿಸ್ಟೆಂಟ್ ಕಮಿಷನರು, ಮತ್ತು ತಹಶೀಲದಾರನು 67ನೇ ಪ್ರಕರಣದ ಮೇರೆಗೆ ಅಥವಾ ಅನ್ಯಥಾ ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯನ್ನು ಅಥವಾ ಇತರ ಸ್ವತ್ತನ್ನು ಬೇಸಾಯ, ಕೈಗಾರಿಕೆ ಅಥವಾ ಯಾವುದೇ ಸಾರ್ವಜನಿಕ ಉಪಯುಕ್ತತೆಯ ಉದ್ದೇಶಗಳಿಗಾಗಿ ಮತ್ತು XII ಅಧ್ಯಾಯದ ಉಪಬಂಧಗಳಿಗೊಳಪಟ್ಟು ಕಟ್ಟಡಗಳ ರಚನೆಯ ಸಲುವಾಗಿ ವಿಲೇ ಮಾಡಬಹುದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 300, 24ನೇ ಜುಲೈ 2024

**KARNATAKA LEGISLATIVE COUNCIL**
**ONE HUNDRED AND FIFTY THIRD SESSION**

# THE KARNATAKA LAND REVENUE (SECOND AMENDMENT) BILL 2024

**(LA Bill No. 35 of 2024)**

**(As passed by the Karnataka Legislative Assembly)**

A Bill further to amend the Karnataka Land Revenue Act, 1964,

Whereas it is expedient further to amend the Karnataka Land Revenue Act, 1964, (Karnataka Act 12 of 1964), for the purposes hereinafter appearing;

Be it enacted by the Karnataka State Legislature in the Seventy fifth year of the Republic of India, as follows:-

**1. Short title and commencement.-** (1) This Act may be called the Karnataka Land Revenue (Second Amendment) Act, 2024.

(2) It shall come into force at once.

**2. Amendment of section 7.-** In the Karnataka Land Revenue Act, 1964, (hereinafter referred to as the Principal Act), for section 7, the following shall be substituted, namely:-

**"7. Appointment, duties and functions of Additional Chief Secretary/ Principal Secretary/Secretary.-** (1) The State Government shall, by notification, appoint Additional Chief Secretary/ Principal Secretary/Secretary.

(2) The Additional Chief Secretary/ Principal Secretary / Secretary shall be the Chief Revenue Officer in the State and shall exercise powers of superintendence and control for the entire state over all Officers subordinate to him.

(3) The Additional Chief Secretary/ Principal Secretary / Secretary shall exercise the powers and discharge the duties conferred and imposed on him by or under this Act or any other law for the time being in force. He shall also exercise such powers and discharge such duties as the State Government may confer or impose in his behalf for the purpose of carrying out the provisions of this Act or any other law for the time being in force or under the Karnataka Government (Transaction of Business) Rules, 1977."

**3. Insertion of new sections 7-A and 7-B.-** In the Principal Act, after section 7 so substituted, the following shall be inserted, namely:-

**"7A. Appointment, duties and functions of Revenue Commissioner.-** (1) The State Government shall, by notification, appoint a Revenue Commissioner, who shall be subordinate to the Additional Chief Secretary/ Principal Secretary/ Secretary.

(2) Subject to the control of the State Government, Revenue Commissioner shall exercise powers of superintendence and control for the entire state over all Officers subordinate to him.

(3) The Revenue Commissioner shall exercise the powers and discharge the duties conferred and imposed on him by or under this Act or any other law for the time being in force. He shall also exercise such powers and discharge such duties as the State Government may confer or impose in this behalf for the purpose of carrying out the provisions of this Act or any other law for the time being in force.

**7B. Appointment, duties and functions of Regional Commissioner.-** (1) The State Government shall, by notification, appoint for each region, a Regional Commissioner who shall be subordinate to the Additional Chief Secretary/Principal Secretary/Secretary

(2) Subject to the control of the State Government, the Regional Commissioner shall be the Chief Revenue Officer in the region and shall exercise powers of superintendence and control within the region over all Officers subordinate to him.

(3) The Regional Commissioner shall exercise the powers and discharge the duties conferred and imposed on him by or under this Act or any other law for the time being in force. He shall also exercise such powers and discharge such duties as the State Government may confer or impose in this behalf for the purpose of carrying out the provisions of this Act or any other law for the time being in force."

**4. Amendment of section 8.-** In section 8 of the Principal Act, in sub-section (1) for the words " who shall be subordinate to the Regional Commissioner" the words "who shall be subordinate to the Revenue Commissioner. and the Regional Commissioner" shall be substituted.

**5. Amendment of section 9.-** In section 9 of the Principal Act, for sub-section (3), the following shall be substituted, namely:-

"(3) The Special Deputy Commissioner appointed under sub-section (1) shall be subordinate to the Revenue Commissioner. And the regional commissioner He shall also be subordinate to the Regional Commissioner of the region, except in such matters as the State Government may, by general or special order, specify in this behalf".

**6. Amendment of section 10.-** In section 10 of the Principal Act, in sub-section (1), after the words "subordinate to", the words "the Revenue Commissioner," shall be inserted.

**7. Amendment of section 13.-** In section 13 of the Principal Act, after the words "orders as may be passed by", the words "the Revenue Commissioner or," shall be inserted.

**8. Amendment of section 14.-** In section 14 of the Principal Act, in sub-section (1), the following shall be substituted, namely:-

"(1) If the Revenue Commissioner is disabled from performing his duties, or is on leave or for any reason vacates his office or dies, the Regional Commissioner stationed at the headquarters of the Revenue Commissioner, shall unless other provision is made by the Government, succeed temporarily to his office and shall be deemed to be the Revenue Commissioner of the State under this Act, until the Revenue Commissioner resumes charge, or until the Government appoints a successor to the former Revenue Commissioner, and such successor takes charge of his appointment.

(1-A). If the Regional Commissioner is disabled from performing his duties, or is on leave or for any reason vacates his office or dies, the Deputy Commissioner stationed at the headquarters of the Regional Commissioner, shall unless other provision is made by the Government, succeed temporarily to his office and shall be deemed to be the Regional Commissioner of the Region under this Act, until the Regional Commissioner resumes charge of his region or until the Government appoints a successor to the former Regional Commissioner, and such successor takes charge of his appointment."

**9. Amendment of section 15.-** In section 15 of the Principal Act, in sub-section (1) after the words "general orders of", the words "the Revenue Commissioner or" shall be inserted.

**10. Amendment of section 16.-** In section 16 of the Principal Act, in sub-section (1) after the words "the State Government", the words "the Revenue Commissioner", shall be inserted.

**11. Amendment of section 69.-** In section 69 of the Principal Act, after the words "the State Government", the words "the Revenue Commissioner", shall be inserted.

## STATEMENT OF OBJECTS AND REASONS

**(As appended to at the time of Introductin)**

The Revenue Commissionerate is established in the state, therefore It is considered necessary further to amend the Karnataka Land Revenue Act, 1964 (Karnataka Act 12 of 1964) to Provide a provision regarding appointment, duties and functions of the Revenue commissionerate and certain other consequential amendments are made.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**KRISHNA BYREGOWDA**
Minister for Revenue

**K.R. MAHALAKSHMI**
Secretary
Karnataka Legislative Council

**ANNEXURE**

**EXTRACT FROM THE KARNATAKA LAND REVENUE ACT, 1964**

**(Karnataka Act 12 of 1964)**

**XXX XXX XXX**

**7. Appointment, duties and functions of Regional Commissioner.-** (1) The State Government shall, by notification, appoint for each Region, a Regional Commissioner.

(2) Subject to the control of the State Government, the Regional Commissioner shall be the Chief Revenue Officer in the region and shall exercise powers of superintendence and control within the region over all Officers subordinate to him.

(3) The Regional Commissioner shall exercise the powers and discharge the duties conferred and imposed on him by or under this Act or any other law for the time being in force. He shall also exercise such powers and discharge such duties as the State Government may confer or impose in this behalf for the purpose of carrying out the provisions of this Act or any other law for the time being in force.

**XXX XXX XXX**

8**. Deputy Commissioner.—**(1) The State Government shall by notification, appoint for each district a Deputy Commissioner, who shall be subordinate to the Regional Commissioner

(2) The Deputy Commissioner shall in his district exercise all the powers and discharge all the duties conferred and imposed on him under this Act or under any law for the time being in force. He may also exercise such powers and discharge such duties as are conferred and imposed on an Assistant Commissioner under this Act or under any other law for the time being in force, and in all matters not specially provided for by law, he shall act according to the instructions of the State Government.

**XXX XXX XXX**

**9. Special Deputy Commissioner.—**(1) Whenever the State Government considers that for any purpose it is expedient to appoint a Special Deputy Commissioner for any district, it may, by notification, appoint a Special Deputy Commissioner for such district, for such purpose and for such period as may be specified in such notification.

(2) The Special Deputy Commissioner shall exercise such powers and perform such duties as are exercised or performed by the Deputy Commissioner in the district or a part of the district under this Act, or any other law for the time being in force, as the State Government may direct.

(3) The Special Deputy Commissioner appointed under sub-section (1) shall be subordinate to the Regional Commissioner. He shall also be subordinate to the Deputy Commissioner of the district. except in such matters as the State Government may, by general or special order, specify in this behalf.

**XXX XXX XXX**

**10. Assistant Commissioners.—** (1) The State Government may, by notification, appoint to each district as many Assistant Commissioners as it may deem expedient; all such Assistant Commissioners and all other officers employed in the Revenue Administration of the district shall be subordinate to the 1 [Regional Commissioner or Deputy Commissioner.

(2) The State Government, may place any Assistant Commissioner appointed under subsection (1) to be in-charge of the revenue administration of x x x one or more taluks called a Revenue Sub-Division. Such Assistant Commissioner shall perform all the duties and exercise all the powers conferred upon the Assistant Commissioner by this Act or any other law for the time being in force. Such Assistant Commissioner shall also, subject to the provisions of Chapter V and to the orders of the State Government, if any, perform all

the duties and exercise all the powers conferred upon the Deputy Commissioner by this Act or any other law for the time being in force.

(3) An Assistant Commissioner appointed under sub-section (1), but not placed in-charge of a Revenue Sub-Division under sub-section (2) shall, subject to the orders of the State Government, exercise such powers and perform such duties as the Deputy Commissioner may assign to him.

**XXX XXX XXX**

**13. A Tahsildar or a Special Tahsildar may depute subordinates to perform certain of his duties.—**A Tahsildar or a Special Tahsildar may, subject to such orders as may be passed by the xxx Regional Commissioner or Deputy Commissioner, depute any of his subordinates to perform any portion of his ministerial duties:

Provided that all acts of his subordinates when so employed shall be liable to revision and confirmation by such Tahsildar or Special Tahsildar.

**XXX XXX XXX**

**14. Officers to discharge duties during temporary vacancy.—** 1 [(1) If the Regional Commissioner is disabled from performing his duties, or is on leave or for any reason vacates his office or dies, the Deputy Commissioner stationed at the headquarters of the Regional Commissioner, shall unless other provision is made by the Government, succeed temporarily to his office and shall be deemed to be the Regional Commissioner of the Region under this Act, until the Regional Commissioner resumes charge of his Region, or until the Government appoints a successor to the former Regional Commissioner, and such successor takes charge of his appointment.

(2) If the Deputy Commissioner is disabled from performing his duties or for any reason vacates his office or leaves his district or dies, the Special Deputy Commissioner, if any, or in his absence, the senior most Assistant Commissioner at the district headquarters shall, unless other provision has been made by the State Government, succeed temporarily to his office, and shall be deemed to be the Deputy Commissioner under this Act, until the Deputy Commissioner resumes charge of his district, or until the State Government appoints a successor and such successor takes charge of his appointment.

(3) If the Assistant Commissioner of a Revenue Sub-Division is disabled from performing his duties or is on leave or for any reason vacates his office or dies, the Tahsildar stationed at the headquarters of the Assistant Commissioner shall, unless other provision is made by the Government, succeed temporarily to his office and shall be deemed to be the Assistant Commissioner of the Revenue Sub-Division under this Act, until the Assistant Commissioner resumes charge of his Revenue Sub-Division, or until the Government appoints a successor to the former Assistant Commissioner, and such successor takes charge of the appointment.

(4) If a Tahsildar is disabled from performing his duties or for any reason, vacates his office or leaves his taluk or dies, the Special Tahsildar, if any, or in his absence, the senior most ministerial officer in the Taluk Office shall succeed temporarily to the said Tahsildar‘s Office and shall be deemed to be the Tahsildar under this Act, until the Tahsildar resumes charge of his Taluk or until such time as a successor is duly appointed and takes charge of his appointment.

**XXX XXX XXX**

**15. Revenue Inspectors.—**(1) The Deputy Commissioner may subject to the general orders of the Regional Commissioner or the State Government, appoint a Revenue Inspector for each circle and he shall perform all the duties of a Revenue Inspector prescribed in or under this Act or in or under any other law for the time being in force, and shall hold office and be governed by such rules as may be prescribed.

(2) Persons holding the office of Revenue Inspector for a circle (by whatever name called) immediately prior to the commencement of this Act shall be deemed to be Revenue Inspectors for such circle till another person is appointed under sub-section (1).

**XXX XXX XXX**

**16. Village Accountant.—**(1) The Deputy Commissioner may, subject to the general orders of the State Government and the Regional Commissioner xxx, appoint a Village Accountant for a village or group of villages and he shall perform all the duties of a Village Accountant prescribed in or under this Act or in or under any other law for the time being in force, and shall hold office under and be governed by such rules as may be prescribed.

(2) Persons holding the office of a Village Accountant for a village or group of villages immediately prior to the commencement of this Act shall be deemed to be Village Accountants for such village or group of villages till another person is appointed under subsection (1).

**XXX XXX XXX**

**69. Disposal of lands or other property belonging to State Government under section 67.—**Subject to such rules as may be made in this behalf, the State Government, the Regional Commissioner xxx, the Deputy Commissioner, the Assistant Commissioner in-charge of a Taluk or Taluks and the Tahsildar, may dispose of land or other property belonging to the State Government under section 67 or otherwise, for purposes of agriculture, industry or any public utility and subject to the provisions of Chapter XII for the construction of buildings.

**XXX XXX XXX**

Govt. Press, Vikasa Soudha, Bengaluru, 24th July, 2024, P7, W.D., Copies 300